ಅಸಲು ದಾವೆ ನಂಃ 01/2020 ಡಿ ಡಬ್ಲ್ಯೂಃ 1- ಬಸವರಾಜ ತಂದೆ ಸಂಗಪ್ಪ ಬೆಡಸೂರು

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05/07/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ VSB ವಕೀಲರಿಂದಃ**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವಾ ಆಸ್ತಿಯ ಮೇಲೆ ಈ ದಾವೆಯ ವಾದಿ ಮತ್ತು ಮಾಗುಂಡಪ್ಪ ಮಲ್ಲಿಕಾಜಪ್ಪ ಬೆಡಸೂರು ಮತ್ತು ಶಿವಕುಮಾರ ತಂದೆ ಬಸಪ್ಪ ಬೆಡೆಸೂರು ವಿರುದ್ಧ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ರೋಣದಲ್ಲಿ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ದಾವೆಯ ವಾದ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಮೇಲೆ ಕಾಣಿಸಿದ ಮೂರು ಜನರು ಹಾಜರಾಗಿ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ದಾವೆಯಲ್ಲಿ ಹಾಜರುಪಡಿಸಿದ ತಕರಾರು ತೋರಿಸಿದ್ದು ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ವಾದಿ ಮತ್ತು ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾವು ಹಾಜರಾಗದ ಕಾರಣ ನ್ಯಾಯಾಲಯವು ಸದರಿ ದಾವೆಯನ್ನು ತಿರಸ್ಕರಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಸದರಿ ದಾವೆಯ ಆದೇಶದ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ನನಗೆ ಏನು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ದಾವಾ ಆಸ್ತಿಯನ್ನು ನಮಗೆ ಅರ್ಧ ಹಿಸ್ಸಾ ಮತ್ತು ಕಳ್ಳಿಮನಿಯವರಿಗೆ ಅರ್ಧ ಹಿಸ್ಸಾವನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಮಾರಾಟ ಮಾಡಿದ್ದು ತಿಳಿದಿರುತ್ತದೆ. ಆದರೆ ಕಳ್ಳಿಮನಿಯವರಿಗೆ ಮಾರಾಟ ಮಾಡಿದ್ದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಕಳ್ಳಿಮನಿಯವರು ಅರ್ಧ ಹಿಸ್ಸಾವನ್ನು ವಾದಿಯವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ರೋಣದಲ್ಲಿ ದಾವಾ ಸಂಖ್ಯೆ 183/2014 ರಲ್ಲಿ ನಾವು ಸಲ್ಲಿಸಿದ ವಾದ ಪತ್ರದಲ್ಲಿ ಅರ್ಧ ಹಿಸ್ಸೆ ಗಣಪತಿಯವರಿಗೆ ಮತ್ತು ಉಳಿದ ಅರ್ಧ ಹಿಸ್ಸಾವನ್ನು ನಾವು ಖರೀದಿ ಮಾಡಿರುತ್ತೇವೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ವಾದ ಪತ್ರದ ಜೊತೆಗೆ ಹಾತನಕಾಶೆಯನ್ನು ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಹಾತನಕಾಶೆಯಲ್ಲಿ ಉತ್ತರಕ್ಕೆಃ ಈ ದಾವೆಯ ವಾದಿ, ದಕ್ಷಿಣಕ್ಕೆಃ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ಬರೆಸಿರುತ್ತೇನೆಂದರೆ ಸರಿಯಲ್ಲ.ದಾವಾ ಆಸ್ತಿಯು ನನ್ನ ಮತ್ತು ವಾದಿಯವರ ಹೆಸರಿನಲ್ಲಿ ಜಂಟಿಯಾಗಿರುತ್ತದೆಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಸದರಿ ಆಸ್ತಿಯು ನನ್ನದು ಆಗಿರುತ್ತದೆ ಎಂದು ನುಡಿದಿರುತ್ತಾರೆ.

2. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ನಿಪಿ-1 ರಲ್ಲಿ ನನ್ನದು ಮತ್ತು ವಾದಿ ಹೆಸರು ಇರುತ್ತದೆ, ಆದರೆ ಸದರಿ ಆಸ್ತಿಯು ನನ್ನದೇ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ನನ್ನ ತಂದೆಯವರು ವಾದಿಯವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ಬಸಪ್ಪ ದತ್ತಕ ಬಸಪ್ಪ ಕಳ್ಳಿಮನಿ ಎಂಬುವವರು ವಾದಿಯವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಮಾರಾಟ ಮಾಡಿರಬಹುದು ನಾವು ಆಗಿನ್ನು ಸಣ್ಣವರಿದ್ದೇವು, ಹಾಗಾಗೀ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ದಾವಾ ಸಂಖ್ಯೆ 183/2014 ನ್ನು ಮಾಡುವಾಗ ದೊಡ್ಡನಿದ್ದೆ. ನನಗೆ ಆಗ ತಿಳುವಳಿಕೆ ಇತ್ತು. ದಾವಾ ಆಸ್ತಿಯ ಉತ್ತರ ಭಾಗಕ್ಕೆ ವಾದಿ ಮತ್ತು ದಕ್ಷಿಣ ಭಾಗಕ್ಕೆ ನಾನು ಮಾಲೀಕನಾಗಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಅರ್ಧ ಹಿಸ್ಸಾವನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಸಂಪೂರ್ಣ ಆಸ್ತಿ ನನ್ನದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1992 ರಿಂದ ದಾವಾ ಆಸ್ತಿಯ ಉತ್ತರ ಭಾಗದ ಅರ್ಧ ಹಿಸ್ಸಾಕ್ಕೆ ವಾದಿಯು ಸ್ವಾಧೀನದಲ್ಲಿ ಇಟ್ಟುಕೊಂಡು ಮಾಲೀಕರಾಗಿರುತ್ತಾರೆಂದರೆ ಸಾಕ್ಷಿಯು ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ನಾವೇ ಸ್ವಾಧೀನದಲ್ಲಿ ಇರುತ್ತೇವೆಎಂದು ನುಡಿದಿರುತ್ತಾರೆ. ವಾದಿ ಮತ್ತು ನನ್ನ ಹೆಸರು ಪಹಣಿಯಲ್ಲಿಜಂಟಿಯಾಗಿ ನಮೂದು ಆಗಿದ್ದು ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ ಮೊದಲನೇ ಹೆಸರು ಆಗಿರುವುದರಿಂದ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ತನ್ನ ಅರ್ಧ ಹಿಸ್ಸಾವನ್ನು ಪಡೆದುಕೊಳ್ಳಲು ನನ್ನನ್ನು ಕೇಳಿ 11-ಇ ನಕ್ಷೆಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸರ್ವೇಯವರ್ ರವರು ಅಳತೆ ಮಾಡಲು ಬಂದಾಗ ಸದರಿ ಆಸ್ತಿ ಜಂಟಿಯಾಗಿರಲಿ ಅಳತೆ ಮಾಡಬೇಡಿ ಎಂದು ಹೇಳಿ ಕಳುಹಿಸಿರುತ್ತೇನೆಂದರೆ ಸರಿಯಲ್ಲ. ಹಾಗಾಗೀ ವಾದಿಯು ತನ್ನ ಅರ್ಧ ಹಿಸ್ಸೆಯನ್ನು ಕೇಳಿಕೊಂಡು ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿಯಲ್ಲ.

3. ಈ ದಿನ ನಾನು ಮತ್ತು ನನ್ನ ಸಹೋದರ ಈಶಪ್ಪ ಸಂಗಪ್ಪ ಬೆಡೆಸೂರು ಕೂಡಿಕೊಂಡು ನ್ಯಾಯಾಲಯಕ್ಕೆ ಬಂದಿರುತ್ತೇವೆ. ನನ್ನ ಸಹೋದರ ಈಶಪ್ಪ ಸಂಗಪ್ಪ ಬೆಡೆಸೂರು ಇವರು ಇದೇ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ 227/2019 ರಂತೆ ನನ್ನ ಮೇಲೆ, ನನ್ನ ತಂದೆಯ ಮೇಲೆ ಹಾಗೂ ವಾದಿಯವರ ವಿರುದ್ಧ ದಾವೆಯನ್ನು ದಾಖಲು ಮಾಡಿರುತ್ತಾರೆಂದರೆ ಸರಿ. ದಾವಾ ಆಸ್ತಿಯ ಉತ್ತರ ಭಾಗದ ಅರ್ಧ ಹಿಸ್ಸಾ ಆಸ್ತಿಗೆ ಸಂಬಂಧಿಸಿದಂತೆ ನನಗೆ, ನನ್ನ ತಂದೆಗೆ ಮತ್ತು ನನ್ನ ಸಹೋದರನಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಜೀವಂತವಾಗಿ

ಇರುತ್ತಾರೆ. ದಾವಾ ಸಂಖ್ಯೆ.227/2019 ರಲ್ಲಿ ನಾನು ಮತ್ತು ನನ್ನ ತಂದೆಯವರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ನಾನನು ಮತ್ತು ನನ್ನ ತಂದೆಯವರು ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷಿಯನ್ನು ನುಡಿದಿರುವುದಿಲ್ಲ ಎಂದರೆ ಸರಿ. ನಾನು ನನ್ನ ತಂದೆಯವರನ್ನು ಈ ದಾವೆಯಲ್ಲಿ ಸಾಕ್ಷಿ ಮಾಡಿಸುವುದಿಲ್ಲ, ಕಾರಣ ನನ್ನ ತಂದೆಯವರಿಗೆ ನಡೆಯಲು ಬರುವುದಿಲ್ಲ. ನಾನು, ನನ್ನ ತಂದೆ ಮತ್ತು ನನ್ನ ಸಹೋದರ ವಾದಿಯವರಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಉತ್ತರ ಭಾಗದ ಅರ್ಧ ಹಿಸ್ಸಾಗೆ ವಾದಿ ಮತ್ತು ದಕ್ಷಿಣ ಭಾಗದ ಅರ್ಧ ಹಿಸ್ಸಾಗೆ ನಾನು ಮಾಲೀಕನಾಗಿದ್ದರೂ ಸಹ ವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಹಾಜರಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.